ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

**ಸಿ.ಸಿ. ನಂ.23/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಮಡಿವಾಳಪ್ಪ | | ಸಿ.ಡಬ್ಲ್ಯೂ ಃ 3 |
| ತಂದೆ ಹೆಸರು | ಃ ಕೆಂಚಪ್ಪ | | ಪಿ.ಡಬ್ಲ್ಯೂ ಃ 1 |
| ವಯಸ್ಸು | ಃ 37 ವರ್ಷ | | |
| ವೃತ್ತಿ | ಃ ಒಕ್ಕಲುತನ | | |
| ವಾಸ ಸ್ಥಳ | ಃ ಮುದನೂರ | | ದಿನಾಂಕ ಃ 23.02.2022 |

**ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ** ಸ.ಸ.ಅ.ರವರಿಂದಃ

ಚಾಸಾ-2 ನನಗೆ ಪರಿಚಯ ಇರುತ್ತಾರೆ. ಸಾಕ್ಷಿಗೆ ಒಂದು ಗುನ್ನೆ ಸ್ಥಳ ಪಂಚನಾಮೆ ಹಾಗೂ 2 ಜಪ್ತು ಪಂಚನಾಮೆಗಳನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಗುನ್ನೆ ಸ್ಥಳ ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಹಾಗೂ 2 ಜಪ್ತು ಪಂಚನಾಮೆಗಳನ್ನು ನಿಪಿ-2 ಮತ್ತು ನಿಪಿ-3 ಎಂದು, ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-2(ಎ) ಮತ್ತು ನಿಪಿ-3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಕೆಂಭಾವಿ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ, ಯಾವ ಕಾರಣಕ್ಕೆ ಸದರಿ ಸಹಿಗಳನ್ನು ಮಾಡಿರುತ್ತೇನೆ ಎಂದು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಏನನ್ನು ಮಾಡಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು.**

**ಪಾಟೀ ಸವಾಲು** ಃ ಸ.ಸ.ಅ.ರವರಿಂದಃ

ದಿನಾಂಕ 8-11-2019 ರಂದು ಬೆ.8-00 ರಿಂದ 9-00 ಗಂಟೆಯವರೆಗೆ ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಸರ್ವೆ ನಂ.27 ರಲ್ಲಿ ಗುನ್ನೆ ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲಾ. ಚಾಸಾ-1 ರವರು ಸದರಿ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲಾ. ಅದೇ ದಿನ ನೀರು ಎತ್ತುವ ಕರೆಂಟ್ ಮೋಟಾರನ್ನು ಮತ್ತು ಇನ್ನೊಂದು ಕಂಪನಿಯ ನೀಲಿ ಬಣ್ಣದ ಕರೆಂಟ್ ಮೋಟಾರನ್ನು ಜಪ್ತು ಪಡಿಸಿಕೊಂಡರು ಎಂದರೆ ಸರಿಯಲ್ಲಾ. ಅದೇ ದಿನ ಪಂಚನಾಮೆಯ ಸಮಯದಲ್ಲಿ ಫೋಟೊಗಳನ್ನು ತೆಗೆದರು ಎಂದರೆ ಸರಿಯಲ್ಲಾ, ಸಾಕ್ಷಿಯು ಸದರಿ ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ, ಸದರಿ ಫೋಟೊಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ನಿಪಿ-1 ರಿಂದ 3 ರಂತೆ ಪಂಚನಾಮೆಯನ್ನು ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ಅದೇ ದಿನ ಒಂದು ಮೋಟಾರ ಸೈಕಲ್

ನಂ.ಕೆಎ-36-ಟಿಹೆಚ್-8724 ನೇದ್ದನ್ನು ಜಪ್ತು ಪಡಿಸಿಕೊಂಡರು ಎಂದರೆ ಸರಿಯಲ್ಲಾ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಯಾವುದೇ ವಿಷಯ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

**ಆರೋಪಿ ಪರ ವಕೀಲರಿಂದ ಃ ಪಾಟೀ ಸವಾಲು ಇರುವುದಿಲ್ಲ.**

**ಮರು ವಿಚಾರಣೆ ಃ** ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
**ಶೋರಾಪುರ.**